**ಸಾಕ್ಷಿಯನ್ನು ದಿಃ 15.01.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ**

4 ಔಷಧಿ ಪಾವತಿ ರಸೀದಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ. 19 ಎಂದು, ಆರು ಟ್ರಾವೆಲಿಂಗ್ ಬಿಲ್ ಅನ್ನು ಹಾಜರು ಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ. 20 ಎಂದು ಗುರುತಿಸಲಾಯಿತು. ಆದುದರಿಂದ ನಾನು ಕೋರಿರುವಂತೆ ಅರ್ಜಿಯನ್ನು ಪುರಸ್ಕರಿಸಬೇಕಾಗಿ ಪ್ರಾರ್ಥಿಸುತ್ತೇನೆ.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ಆಸ್ಪತ್ರೆಯಲ್ಲಿ ಮತ್ತು ಪೋಲೀಸರ ಮುಂದೆ ನನಗೆ ಎಷ್ಟು ವಯಸ್ಸಾಗಿದೆ ಎಂದು ಹೇಳಿರುತ್ತೇನೆ. ಆ ಪ್ರಕಾರ ನನಗೆ 60 ವರ್ಷ ವಯಸ್ಸು ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿ. ನಾನು ಹೇಳಿದ ಪ್ರಕಾರ ಪೋಲೀಸರು ಮತ್ತು ಆಸ್ಪತ್ರೆಯವರು ನನ್ನ ವಯಸ್ಸು ನಮೂದು ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ 54 ವರ್ಷ ವಯಸ್ಸು ನನಗೆ ಗೊತ್ತಿಲ್ಲದೆ ನನ್ನ ವಯಸ್ಸು ಬರೆದಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ನನ್ನ ವಯಸ್ಸು ತಪ್ಪಾಗಿ ಬರೆದಿರುತ್ತಾರೆ ಎಂದು ತಕರಾರು ಸಲ್ಲಿಸಿರುವುದಿಲ್ಲ. ನನ್ನ ಜನನ ಪ್ರಮಾಣ ಪತ್ರ ಹಾಜರು ಪಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿಯು ನನ್ನ ಜನನ ದಿನಾಂಕದ ಬಗ್ಗೆ ಬರೆಯಿಸಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನನಗೆ ಅನುಕೂಲ ಆಗುವ ರೀತಿಯಲ್ಲಿ ನನ್ನ ವಯಸ್ಸನ್ನು ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ.

ಅಪಘಾತ ಆದ ದಿನ ನಾನು ಬೈಕ್ ನಲ್ಲಿ ನನ್ನ ಮಗನ ಜೊತೆ ಹಿಂಬದಿ ಸವಾರಳಾಗಿ ಹೋಗುತ್ತಿದ್ದೆ ಎಂದರೆ ಸರಿ. ನಾವು ಆ ದಿನ ಇಬ್ಬರು ಹೆಲ್ಮೆಟ್ ಹಾಕಿರಲಿಲ್ಲ ಎಂದರೆ ಸರಿಯಲ್ಲ. ಒಂದು ವೇಳೆ ಹೆಲ್ಮೆಟ್ ಹಾಕುತ್ತಿದ್ದರೆ ಆ ಬಗ್ಗೆ ಪೋಲೀಸ್ ದಾಖಲೆಗಳಲ್ಲಿ ನಮೂದಾಗುತ್ತಿತ್ತು ಎಂದರೆ ಹೆಲ್ಮೆಟ್ ಹಾಕಿದ್ದೇವು ಎಂದು ಉತ್ತರಿಸಿರುತ್ತಾರೆ. ಆ ದಿನ ಚಲಾಯಿಸುತ್ತಿದ್ದ ಮೋಟಾರ್ ಸೈಕಲ್ ನನ್ನ ಮಗನಿಗೆ ಸೇರಿದ್ದು. ನನ್ನ ಮಗನಿಗೆ ಚಾಲನ ಪರವಾನಗಿ ಇತ್ತು. ಅದನ್ನು ಹಾಜರು ಪಡಿಸಲು ತೊಂದರೆ ಇಲ್ಲ. ಮೋಟಾರ್ ಸೈಕಲ್ ಗೆ ವಿಮೆ ಚಾಲ್ತಿಯಲ್ಲಿರಲಿಲ್ಲ ಎಂದರೆ ಸರಿಯಲ್ಲ.

ಆ ಕಾರಣಕ್ಕಾಗಿ ಅದನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತವು ಮುಖಾಮುಖಿಯಾಗಿರುತ್ತದೆ ಎಂದರೆ ಸರಿ. ಅಪಘಾತ ಆದ ದಿನವೇ ದೂರು ದಾಖಲಿಸಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಅದೇ ದಿನ ದಾಖಲಿಸಿರುತ್ತೇವೆ ಎಂದು ಉತ್ತರಿಸಿರುತ್ತಾರೆ. ನನ್ನ ಮಗ ರಸ್ತೆ ನಿಯಮ ಉಲ್ಲಂಘಿಸಿದ ಕಾರಣ ಅದೇ ದಿನ ದೂರು ದಾಖಲಿಸಿರುವುದಿಲ್ಲ ಎಂದರೆ ಸರಿಯಲ್ಲ. ದಿಃ 18.02.2024 ರಂದು ದೂರು ದಾಖಲಿಸಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಆ ಬಗ್ಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ನನಗೆ ಪರಿಹಾರ ಸಿಗಲು ಅನುಕೂಲ ಆಗುವ ರೀತಿಯಲ್ಲಿ ನನ್ನ ಮಗ ಸುಳ್ಳಾಗಿ ದೂರು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತ ಎದುರುದಾರರ ಕಾರಿನಿಂದ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಕಾರಿನ ಚಾಲಕನು ರಸ್ತೆ ನಿಯಮವನ್ನು ಪಾಲಿಸಿಕೊಂಡು ಬರುತ್ತಿದ್ದನು ಎಂದರೆ ಸರಿಯಲ್ಲ.

ಅಪಘಾತ ಆದ ನಂತರ ಸರಗೂರಿನ ವಿವೇಕನಾಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು ನಂತರ ಮೈಸೂರಿನ ಸುಯೋಗ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಡಾ. ಸಂತೋಷ್ ರವರು ಚಿಕಿತ್ಸೆ ನೀಡಿರುತ್ತಾರೆ. ಗಾಯಗಳು ಗುಣಮುಖ ಆದ ಕಾರಣ ಬಿಡುಗಡೆ ಮಾಡಿರುತ್ತಾರೆ ಎಂದರೆ ಸರಿ. ನನಗೆ ಒಬ್ಬ ಗಂಡು ಮಗ ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ. ಇಬ್ಬರು ಹೆಣ್ಣು ಮಕ್ಕಳಿಗೂ ಮದುವೆಯಾಗಿದೆ. ನನ್ನ ಮಗ ನನ್ನ ಜಮೀನಿನಲ್ಲಿ ಕೆಲಸ ಮಾಡುತ್ತಾನೆ ಮತ್ತು ಬೇರೆಯವರ ಜಮೀನಿನಲ್ಲಿಯೂ ಕೆಲಸ ಮಾಡುತ್ತಾನೆ. ನನ್ನ ಮಗನ ಆದಾಯದ ಮೇಲೆ ನಮ್ಮ ಕುಟುಂಬ ನಿರ್ವಹಣೆ ಆಗುತ್ತಿದೆ ಎಂದರೆ ಸರಿಯಲ್ಲ. ನಾನು ಕೂಲಿ ಕೆಲಸ ಮಾಡುತ್ತಿದ್ದೆ ಎಂದು ಯಾವ ದಾಖಲೆಯಲ್ಲೂ ನಮೂದು ಆಗಿರುವುದಿಲ್ಲ ಎಂದರೆ ಕೂಲಿ ಮಾಡುತ್ತಿದ್ದೆ ಎಂದು ಉತ್ತರಿಸಿರುತ್ತಾರೆ. ನಾನು ಕೂಲಿ ಕೆಲಸ ಮಾಡುತ್ತಿದ್ದರೆ ನನ್ನ ಹೆಸರು ಕಾರ್ಮಿಕರ ಸಂಘದಲ್ಲಿ ನಮೂದಾಗುತ್ತಿತ್ತು ಎಂದರೆ ಸರಿಯಲ್ಲ. ಈಗ ಬರುವ ಜಮೀನಿನ ಆದಾಯದಲ್ಲಿ ನಮ್ಮ ಕುಟುಂಬ ನಿರ್ವಹಣೆ ಆಗುತ್ತಿದೆ ಎಂದರೆ ಸರಿಯಲ್ಲ. ನಮ್ಮ ಕುಟುಂಬವನ್ನು ನನ್ನ ಮಗನೇ ನಿರ್ವಹಣೆ ಮಾಡುತ್ತಿರುವ ಕಾರಣ ನಾನು ಕೂಲಿ ಮಾಡುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ. 20 ರಲ್ಲಿ ನಾನು ಕೆ.ಎಸ್.ಆರ್.ಟಿ.ಸಿ ಬಸ್ಸಿನಲ್ಲಿ ಪ್ರಯಾಣ ಮಾಡಬಾರದು ಎಂದು ವೈದ್ಯರು ಸಲಹೆ ನೀಡಿರುವುದಿಲ್ಲ ಎಂದರೆ ಸರಿ. ನಿಪಿ. 20 ಅನ್ನು ಪರಿಹಾರಕ್ಕಾಗಿ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ. 20 ರಲ್ಲಿ ಸೀಲು, ಸಹಿ ಇರುವುದಿಲ್ಲ ಎಂದರೆ ಆ ಬಗ್ಗೆ ಗೊತ್ತಿಲ್ಲ. ನಾನು ಬಾಡಿಗೆಗೆ ಪಡೆದ ಕಾರಿನ ಮಾಲೀಕರಿಗೆ ವಿಚಾರಣೆ ಮಾಡಿಸಲು ತೊಂದರೆ ಇಲ್ಲ. ಔಷಧಿ ಪಾವತಿ ರಶೀದಿಗಳನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸುಯೋಗ ಆಸ್ಪತ್ರೆಯಲ್ಲಿ ನನಗೂ ಅಪಘಾತಕ್ಕೂ ಪೂರ್ವದಲ್ಲಿ ಇರುವ ಕಾಯಿಲೆಗಳಿಗೂ ಚಿಕಿತ್ಸೆ ಪಡೆದುಕೊಂಡಿರುತ್ತೇನೆ ಎಂದರೆ ಸರಿ. ಪರಿಹಾರ ಸಿಗಲಿ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.